5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10022/21

ಪಿಡಬ್ಲೂ- 2
ಸಿಡಬ್ಲೂ- 2

| | | |
|---|---|---|
| ಸಾಕ್ಷಿ ಹೆಸರು | - | ಕೃಷ್ಣಪ್ಪ |
| ತಂದೆ ಹೆಸರು | - | ದುರ್ಗಪ್ಪ |
| ವಯಸ್ಸು | - | 54 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸಃ | - | ಸೀಗೆಹಳ್ಳಿ ಗ್ರಾಮ, ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ 25-04-2024

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನನಗೆ ಮೃತ ಹೊಸಬಾಳೆ ಮೋಹನಪ್ಪ ಗೊತ್ತು. ಆರೋಪಿ ಗೊತ್ತು. ಮೃತ ಹೊಸಬಾಳೆ ಮೋಹನಪ್ಪನಿಗೆ 2 ಜನ ಹೆಣ್ಣು ಮಕ್ಕಳು. ಮೃತ ಮೋಹನಪ್ಪನ ಅಪ್ಪನ ಅಣ್ಣ ಮಂಜಪ್ಪನಿಗೆ ಆಸ್ತಿ ಸಂಬಂಧ ಅವರ ನಡುವೆ ಏನು ಇತ್ತು ಎಂದು ನನಗೆ ಗೊತ್ತಿಲ್ಲ. ಮೋಹನಪ್ಪನಿಗೆ ಮತ್ತು ಆತನ ಅಣ್ಣ ಮಂಜಪ್ಪನಿಗೆ ಏನಾದರೂ ಜಮೀನು ಇತ್ತ ಎಂಬ ಬಗ್ಗೆ ಗೊತ್ತಿಲ್ಲ. ಮೃತ ಮೋಹನಪ್ಪ ಮತ್ತು ಆರೋಪಿಗೂ ಆದ ಗಲಾಟೆ ಬಗ್ಗೆ ನನಗೆ ಗೊತ್ತಿಲ್ಲ ಆ ಸಮಯದಲ್ಲಿ ನಾನು ಊರಿನಲ್ಲಿ ಇರಲಿಲ್ಲ. ಆರೋಪಿಯು ಮೃತನ ಅಳಿಯ ಕೆಂಚಪ್ಪನಿಗೆ ಹೊಡೆದ ಬಗ್ಗೆ ನನಗೆ ಗೊತ್ತಿಲ್ಲ. ಊರಿನ ಗ್ರಾಮಸ್ಥರು ಅವರ ನಡುವೆ ಪಂಚಾಯ್ತಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯು ಮೃತ ಮೋಹನಪ್ಪನಿಗೆ ಗ್ರಾಮಸ್ದರ ಮುಂದೆ ಬೆದರಿಕೆ ಹಾಕಿದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ನನ್ನ ಬಳಿ ಹಾಗೂ ಗ್ರಾಮಸ್ದರ ಬಳಿ ಮೋಹನಪ್ಪನನ್ನು ಕೊಲೆ ಮಾಡುತ್ತೇನೆ ಎಂದು ಹೇಳಿರುವುದಿಲ್ಲ. ಮೃತ ಮೋಹನಪ್ಪನಿಗೆ ಆರೋಪಿ ಹಲ್ಲೆ ಮಾಡಿದ್ದನ್ನು ನಾನು ನೋಡಿಲ್ಲ, ಆ ಸಮಯದಲ್ಲಿ ನಾನು ಊರಿನಲ್ಲಿ ಇರಲಿಲ್ಲ. ಗಲಾಟೆ ನೋಡಿದ್ದೇನೆ ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ನಾನು ಗದ್ದೆಗೆ ಹೋಗುವಾಗ ಪೋಲೀಸರು ದಾಖಲೆಗೆ ನನ್ನ ಸಹಿ

ಪಡೆದಿರುತ್ತಾರೆ. ದಿನಾಂಕಃ 27-06-2022 ರಂದು ಪೋಲೀಸರು ಮಹಜರ್ ಗೆ ಮೋಹನಪ್ಪನ ಮನೆಯ ಬಳಿ ಬಂದಿದ್ದರು. ಆ ಸಮಯದಲ್ಲಿ ಪೋಲೀಸರಲ್ಲದೇ ಗ್ರಾಮದವರಾದ ಚಾಸಾ-9 ಮತ್ತು ಚಾಸಾ11 ರವರು ಇದ್ದರು. ಪೋಲೀಸರು ಮೋಹನಪ್ಪ ಕುಸಿದು ಬಿದ್ದ ಸ್ಥಳದಲ್ಲಿ ರಕ್ತ ಬಿದ್ದ ಕಾರಣ ನಾನು ಪೋಲೀಸರಿಗೆ ಸದರಿ ಸ್ಥಳವನ್ನು ಪೋಲೀಸರಿಗೆ ತೋಸಿರುತ್ತೇನೆ. ಮೋಹನಪ್ಪ ಹೇಗೆ ಕುಸಿದುಬಿದ್ದ ಎಂದು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ರಕ್ತದ ಮಣ್ಣನ್ನು ಪೋಲೀಸರು ತೆಗೆದುಕೊಂಡಿರುತ್ತಾರೆ. ನಂತರ ಪೋಲೀಸರು ಸ್ಥಳದಲ್ಲಿ ಮತ್ತೇನು ಮಾಡಲಿಲ್ಲ ನಾನು ಸದರಿ ದಾಖಲೆಗೆ ಸಹಿ ಮಾಡಿ ಹೋಗಿರುತ್ತೇನೆ. ನಾನು ಸದರಿ ಸ್ಥಳಕ್ಕೆ ಹೋದಾಗ ಬೆಳಿಗ್ಗೆ 11-30 ಗಂಟೆ ಆಗಿತ್ತು.

ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ನ್ನು ನಿಪಿ -2 ಎಂದು ಸಾಕ್ಷಿಯ ಸಹಿಯನ್ನು ನಿಪಿ -2(ಎ) ಎಂದು ಗುರುತಿಸಲಾಯಿತು. ನಿಪಿ -2 ಕ್ಕೆ ನನ್ನ ಜೊತೆಯಲ್ಲಿ ಚಾಸಾ9 ಮತ್ತು ಚಾಸಾ11 ರವರುಸಹಿ ಮಾಡಿರುತ್ತಾರೆ. ನಿಪಿ -2 ರ ಸಮಯದಲ್ಲಿ ಫೋಟೋ ತೆಗೆಸಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ -3 ಮತ್ತು ನಿಪಿ -4 ಎಂದು ಗುರುತಿಸಲಾಯಿತು. ನಿಪಿ -3 ಮತ್ತು ನಿಪಿ -4 ರಲ್ಲಿ ನಾನು ಕಂಡುಬರುತ್ತೇನೆ . ನಿಪಿ 4 ರಲ್ಲಿ ಗುದ್ಲಿ ಕಂಡುಬರುತ್ತದೆ. ಸದರಿ ಗುದ್ಲಿಯನ್ನು ಪೋಲೀಸರು ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ. ಪೋಲೀಸರು ಮಹಜರ್ ಗಲ್ಲದೇ ಬೇರೆ ದಾಖಲೆಗೆ ಸಹಿ ಪಡೆದಿದ್ದಾರಾ ಎಂದರೆ ಮಹಜರ್ ಗೆ ಮಾತ್ರ ಸಹಿ ಪಡೆದಿದ್ದಾರೆ ಎಂದು ನುಡಿಯುತ್ತಾರೆ.

ಮೋಹನಪ್ಪ ಯಾವಾಗ, ಎಲ್ಲಿ, ಹೇಗೆ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಮೋಹನಪ್ಪ ಯಾವ ಕಾರಣಕ್ಕೆ ತೀರಿಕೊಂಡರು ಎಂದು ಪೋಲೀಸರಿಗೆ ನಾನು ಹೇಳಿಕೆ ಕೊಟ್ಟಿಲ್ಲ.

(ಈಗ ನ್ಯಾಯಾಲಯದ ಮುಂದೆ, ಮಹಜರ್ ಕಾಲಕ್ಕೆ ಜಪ್ತಿ ಮಾಡಿದ ಸ್ವತ್ತುಗಳನ್ನು ಬಿಳಿಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ ಸೀಲು ಹಾಕಿದ್ದನ್ನು, ಅವುಗಳನ್ನು ತೆರೆದ ನ್ಯಾಯಾಲಯದಲ್ಲಿ ಸೀಲುಗಳನ್ನು ಬಿಚ್ಚಿ ನೋಡಲು ಸರ್ಕಾರಿ ಅಭಿಯೋಜಕರು ಅನುಮತಿ

ಕೋರಿದ್ದು ಅನುಮತಿ ನೀಡಲಾಯಿತು, ಅದರಂತೆ ಸದರಿ ಸ್ವತ್ತುಗಳ ಸೀಲ್ ಬಿಚ್ಚಿ ತೆರೆಯಲಾಯಿತು)

ರಕ್ತಮಿಶ್ರಿತ ಮಣ್ಣನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ -1 ಎಂದು ಗುರುತಿಸಲಾಯಿತು. ನಿಪಿ -4 ಫೋಟೋದಲ್ಲಿ ಕಂಡುಬರುವ ಗುದ್ದಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮಾ -2 ಎಂದು ಗುರುತಿಸಲಾಯಿತು.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಸೀಗೆಹಳ್ಳಿಯಲ್ಲಿ ಮೋಹನಪ್ಪ ಮತ್ತು ಮಂಜಪ್ಪನಿಗೆ 3 ಎಕರೆ ಬಗರ್ ಹುಕುಂ ಜಮೀನು ಇದ್ದು ಸದರಿ ಜಮೀನನ್ನುಖ ಅವರು ಸಮಾನವಾಗಿ ಹಂಚಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೋಹನಪ್ಪನಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದ ಕಾರಣ ಅವರಿಗೆ ಆಸ್ತಿ ಸಿಗಬಾರದು ಎಂದು ಆರೋಪಿ ಅವರಿಗೆ ತೊಂದರೆ ಕೊಡುತ್ತಿದ್ದ ಎಂದರೆ ಸರಿಯಲ್ಲ. ಮೃತ ಮೋಹನಪ್ಪನ ಮನೆಯ ಎದುರು ಇದ್ದ ಜಾಗಕ್ಕೆ ಯಾವುದೇ ದಾಖ್ಲೆ ಇಲ್ಲದಿದ್ದ ಕಾರಣ ಸದರಿ ಜಾಗವನ್ನು ಲಪಟಾಯಿಸಲು ಮೋಹನಪ್ಪನಿಗೆ ಆರೋಪಿ ತೊಂದರೆ ಕೊಡುತ್ತಿದ್ದ ಎಂದರೆ ಗೊತ್ತಿಲ್ಲ. ಈ ವಿಚಾರವಾಗಿ ಹಲವಾರ ಬಾರಿ ಗ್ರಾಮದಲ್ಲಿ ಪಂಚಾಯಿತಿ ಆಗುತ್ತಿತ್ತು ಎಂದರೆ ಗೊತ್ತಿಲ್ಲ. ಮೋಹನಪ್ಪ ಕುಸಿದು ಬೀಳುವ 3 ತಿಂಗಳ ಮೊದಲು ದಿನಾಂಕಃ 20-03-2022 ರಂದು ಆರೋಪಿಯು ಮೋಹನಪ್ಪನ ಜೊತೆ ಗಲಾಟೆ ಮಾಡಿ ಆತನ ಅಳಿಯನ ಮೇಲೆ ಹಲ್ಲೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಊರಿನಲ್ಲಿ ಗ್ರಾಮಸ್ಥರಾದ ಕುಂಬ್ರಿ ಸುರೇಶ ಮತ್ತು ನಾಗರಾಜಪ್ಪ ತುಕ್ಕಪ್ಪ ರವರು ರಾಜಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ಆರೋಪಿ ಗ್ರಾಮಸ್ಥರ ಎದುರು ಮೃತನನ್ನು ಕೊಲೆ ಮಾಡುತ್ತೇನೆ ಎಂದು ಹೇಳಿದ್ದ ಎಂದರೆ ಗೊತ್ತಿಲ್ಲ. ಊರಿನಲ್ಲಿ ಮೋಹನಪ್ಪನನ್ನು ಕೊಲೆ ಮಾಡುವುದಾಗಿ ಆರೋಪಿ ಹೇಳಿಕೊಂಡು ತಿರುಗಾಡುತ್ತಿದ್ದ ಎಂದರೆ ಗೊತ್ತಿಲ್ಲ.

ದಿಃ25-06-2022 ರಂದು ಸಾಯಂಕಾಲ 5-30 ಗಂಟೆಗೆ ನಾನು ಮನೆ ಹತ್ತಿರ ಇದ್ದಾಗ ------------------------ತಲೆಗೆ ಬಲವಾಗಿ ಹೊಡೆದು ರಕ್ತಗಾಯಪಡಿಸಿದನು ಎಂದರೆ ನನಗೆ ಗೊತ್ತಿಲ್ಲ.

ಹೊಸಬಾಳೆ ಮೋಹನಪ್ಪ ರಕ್ತಗಾಯಗೊಂಡು ಅಲ್ಲೇ ಸ್ಥಳದಲ್ಲಿ ಕುಸಿದು ಬಿದ್ದರು ನಂತರ ---------------------------- ಮೋಹನಪ್ಪ ರವರ ಮಗಳು ಸೌಮ್ಯ ರವರಿಗೆ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಂತರ ಹೊಸಬಾಳೆ ಮೋಹನಪ್ಪ ರವರನ್ನು ಅವರ ಹೆಂಡತಿ ಮತ್ತು ಷಣ್ಮುಖಪ್ಪರವರೊಂದಿಗೆ ವೈದ್ಯರ ಸಲಹೆ ಮೇರೆಗೆ -----------------------------------ಪೋಲೀಸರ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ -5 ಎಂದು ಗುರುತಿಸಲಾಯಿತು.

ಆ ಸಮಯದಲ್ಲಿ ಪೋಲೀಸರು ಸಾದಾ ಮಣ್ಣನು ಸಹ ವಶಪಡಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಸಾದಾ ಮಣ್ಣನ್ನು ಅನುಕೂಲಕ್ಕಾಗಿ ಮು ಮಾ -3 ಎಂದು ಗುರುತಿಸಲಾಯಿತು. ಮೋಹನಪ್ಪನ ತಲೆಗೆ ಆರೋಪಿಯು ಗುದ್ಲಿಯಿಂದ ಹೊಡೆದಿದ್ದು ಅದನ್ನು ಪೋಲೀಸರು ಅಮಾನತ್ತುಪಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ -2 ರ ಸಮಯದಲ್ಲಿ ಪೋಲೀಸರು ಕಚ್ಚಾನಕಾಶೆಯನ್ನು ತಯಾರು ಮಾಡಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಸ್ಕೆಚ್ ನ್ನು ಸಂಜೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ಕೆಚ್ ನ್ನು ನಿಪಿ -6 ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ನಿಪಿ -6 ಕ್ಕೆ ನಾನು ಸ್ಥಳದಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂ:25-06-2022 ರಂದು ಸಂಜೆ 5-30 ಗಂಟೆಗೆ ಆದ ಮಾರಣಾಂತಿಕ ಹಲ್ಲೆಯಿಂದ ಗಾಯಗೊಂಡಿದ್ದ ---------------------------------- ವೆನ್ ಲಾಕ್ ಆಸ್ಪತ್ರೆಯಲ್ಲಿ ಮೃತಪಟ್ಟಿರುವ ವಿಚಾರವನ್ನು ಶ್ರೀಮತಿ ಸೌಮ್ಯ ಅದೇ ದಿನ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಈ ಬಗ್ಗೆ ನಾನು ಸಿ ಪಿ ಐ ರವರ ಮುಂದೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ -7 ಎಂದು ಗುರುತಿಸಲಾಯಿತು.

ಯಾವುದಾದರೂ ಒಂದು ಸ್ಥಳವನ್ನು ತೋರಿಸಬೇಕಾದರೆ ಆ ಸ್ಥಳದ ಬಗ್ಗೆ ಗೊತ್ತಿದ್ದರೆ ಮಾತ್ರ ಸ್ಥಳವನ್ನು ತೋರಿಸಬೇಕು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆರೋಪಿ ಮತ್ತು ಮೋಹನಪ್ಪನ ನಡುವೆ ಗಲಾಟೆಯಾದ ಬಗ್ಗೆ, ಆರೋಪಿ ಮೋಹನಪ್ಪನಿಗೆ ಹಲ್ಲೆ ಮಾಡಿದ ಬಗ್ಗೆ ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತನ ಪರ ವಕೀಲರಿಂದ:</u>

ನಿಪಿ -2 ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).